## ಲವ್ಲಿ ‘ಲವ್ ಗುರುಗಳು’

ಕಲರ್ಸ್ ಕನ್ನಡದ ‘ಕನ್ನಡತಿ’ಯಲ್ಲಿ ಅಮ್ಮಮ್ಮ, ಭುವಿ ಮತ್ತು ಹರ್ಷನ ನಂತರ ಹೆಚ್ಚು ಗಮನ ಸೆಳೆಯುವವರು ‘ಲವ್ ಗುರುಗಳಾದ’ ಬಿಂದು ಮತ್ತು ಸುಚಿ. ಅವರ ಚಿನಕುರುಳಿಯಂತಹ ಸಂಭಾಷಣೆ, ಬಾಡಿ ಲಾಂಗ್ವೇಜ್, ಮುಖಭಾವ ಮುದ ನೀಡುತ್ತವೆ. ಲವರ್ಸ್‌ಗಳಿಗೆ ನೀಡುವ ಟಿಪ್ಸ್, ಪ್ರೇಮಿಗಳನ್ನು ಗೋಳು ಹೊಯ್ದುಕೊಳ್ಳುವ ಪರಿಯಲ್ಲಿ ನೈಜತೆ ಎದ್ದು ಕಾಣುತ್ತದೆ. ಅಣ್ಣ–ತಂಗಿ, ಅಕ್ಕ–ತಂಗಿ ಜಗಳವಾಡುವುದು ಮತ್ತು ಒಬ್ಬರಿಗೊಬ್ಬರು ಟಾಂಗ್ ನೀಡುವುದು ಇಷ್ಟವಾಗುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಎಳೆತವಿಲ್ಲ, ಬರೀ ಸೆಳೆತ

ಸಿರಿ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ‘ಯುಗಾಂತರ’ ಉತ್ತಮ ಧಾರಾವಾಹಿ. ಪಾತ್ರಗಳ ಆಯ್ಕೆಯಿಂದ ಹಿಡಿದು ಎಲ್ಲಾ ವಿಭಾಗಗಳಲ್ಲೂ ತನ್ನದೇ ಆದ ಮೆರುಗನ್ನು ಪಡೆದಿದೆ. ಎಲ್ಲೂ ಎಳೆತವಿಲ್ಲ, ಸೆಳೆತವಿದೆ. ಸದಾಶಿವರಾಯರ ಅಭಿನಯ ಅದ್ಭುತ. ನೆಗೆಟಿವ್ ಪಾತ್ರಗಳೂ ಮಿಂಚುತ್ತಿವೆ. ಈ ಕಥೆ ಜೀವನಕ್ಕೆ, ಸಮಾಜಕ್ಕೆ ತೀರ ಹತ್ತಿರವಾಗಿದೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಅತಾರ್ಕಿಕ ರಾಮಾಚಾರಿ

ಕಲರ್ಸ್ ಕನ್ನಡದ ‘ರಾಮಾಚಾರಿ’ ಆರಂಭದಲ್ಲಿ ಹೊಸತನದ ಕುತೂಹಲವನ್ನು ಹುಟ್ಟಿಸಿತ್ತು. ಬರಬರುತ್ತ ಇದು ಕೂಡ ಅರ್ಥವಿಲ್ಲದ ಕಥಾನಕ ಆಗುತ್ತಿದೆ. ಸಂಸ್ಕೃತಿ ಹೇಳ ಹೊರಟು, ಬರಿಯ ಖಾಲಿ ವೇದಾಂತ ತೋರಿಸಲಾಗುತ್ತಿದೆ. ಪ್ರತಿ ಘಟನೆಗಳೂ ಕೆಟ್ಟ ದೃಶ್ಯಗಳನ್ನು ತೋರಿಸಲು ಸ್ಪರ್ಧೆಗೆ ಬಿದ್ದಂತೆ ಕಾಣುತ್ತದೆ.

ವಾರದ ಪತ್ರ

## ನೃತ್ಯ ಸರಳವಾಗಿ ಇರಬಾರದೆ?

ಝೀ ಕನ್ನಡದ ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’ನ ಕೆಲವು ಸಂಚಿಕೆ ನೋಡಲು ಭಯವಾಗುತ್ತದೆ. ಡಾನ್ಸ್‌ನ ಹಾವ–ಭಾವ, ಪ್ರಸಾದನ ಸಭ್ಯತೆಯ ಚೌಕಟ್ಟಿನಲ್ಲಿಲ್ಲ. ನೋಡುಗರಿಗೆ ಎದೆ ನಡುಕ ಉಂಟಾಗುತ್ತದೆ. ತೀರ್ಪುಗಾರರೂ ಕೆಲವು ಸಲ ಮುಖ ಮುಚ್ಚಿಕೊಳ್ಳುತ್ತಾರೆ. ಹಿನ್ನೆಲೆ ಸಂಗೀತದ ಅಬ್ಬರ ಸೇರಿಕೊಂಡು, ನೃತ್ಯಪಟುಗಳು ಡಾನ್ಸ್ ಮಾಡುತ್ತಾರೋ ಸರ್ಕಸ್ ಮಾಡುತ್ತಾರೋ ಎಂದು ಅನುಮಾನ ಬರುತ್ತದೆ. ಇದನ್ನು ನೋಡಿದ ಮಕ್ಕಳು ಅನುಕರಿಸಿದರೆ ಅವರಿಗೆ ಅಪಾಯ ತಂದುಕೊಳ್ಳುವ ಸಾಧ್ಯತೆ ಇದೆ. ಇಂತಹ ತಾಂತ್ರಿಕ ಕೈಚಳಕ ಬಹುತೇಕರಿಗೆ ಅರ್ಥವಾಗುವುದಿಲ್ಲ. ಸಹಜ ಮತ್ತು ಸರಳವಾಗಿ ಡಾನ್ಸ್ ಮಾಡುವುದು ಒಳಿತಲ್ಲವೇ?

—ಭಾರತೀ ಗಂಗಾಧರ್, ಬೆಂಗಳೂರು

ಒಂದು ವಾಹಿನಿಯ ಎಲ್ಲ ಧಾರಾವಾಹಿಗಳೂ ಒಂದೇ ಕಾರ್ಖಾನೆಯಲ್ಲೇ ತಯಾರಾಗುತ್ತವೆ, ಕಲಾವಿದರು ಮಾತ್ರ ಬೇರೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಸಾಹಿತ್ಯ ಗುರು

ಕನ್ನಡ ಡಿಂಡಿಮವನ್ನು ಬಾರಿಸು ಎನ್ನುವ ದೂರದರ್ಶನದ ಚಂದನದ ಸಾಹಿತಿಗಳ ಸಂದರ್ಶನಕ್ಕೆ ‘ಲಿಟರರಿ ಗುರು’ ಎಂಬ ಇಂಗ್ಲಿಷ್ ಮಿಶ್ರಿತ ಶೀರ್ಷಿಕೆ ಏಕೆ? ‘ಸಾಹಿತ್ಯ ಗುರು’ ಎಂಬ ಪೂರ್ಣ ಕನ್ನಡ ಪದ ಹೆಚ್ಚು ಉಚಿತವಲ್ಲವೇ?

—ವೀಕ್ಷಕ, ಬೆಂಗಳೂರು

## ಅಚ್ಚರಿಯ ಅನಾವರಣ



ಫೇಸ್‌ಬುಕ್‌ನಲ್ಲಿ ಕಣ್ಣಾಡಿಸುವವರಿಗೆ ಕಲಾವಿದರಾದ ಐಶ್ವರ್ಯ ಹಾಗೂ ಸೌಂದರ್ಯ ಸಹೋದರಿಯರ ಪರಿಚಯವಿರುತ್ತದೆ. ಈ ಅಪ್ರತಿಮ ಗಾಯಕಿಯರು ಎಂ.ಎಸ್. ಸುಬ್ಬಲಕ್ಷ್ಮಿಯವರ ಮರಿಮೊಮ್ಮಕ್ಕಳು ಎಂದಾಗಲಿ, ಪ್ರಸ್ತುತ ಬೆಂಗಳೂರಿನಲ್ಲೇ ನೆಲೆಸಿದ್ದಾರೆ ಎಂಬ ಮಾಹಿತಿಯಾಗಲಿ ಹೆಚ್ಚಿನವರಿಗೆ ಗೊತ್ತಿರಲಿಕ್ಕಿಲ್ಲ. ಚಂದನ ವಾಹಿನಿ ‘ವಾರದ ಅತಿಥಿ’ ಕಾರ್ಯಕ್ರಮಕ್ಕೆ ಈ ಸಹೋದರಿಯರನ್ನು ಪರಿಚಯಿಸುವ ಮೂಲಕ ಅವರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅನಾವರಣ ಮಾಡಿತು.

‘ವಾರದ ಅತಿಥಿ’ ಕಾರ್ಯಕ್ರಮವು ಪ್ರತಿಷ್ಠಿತರ ಸಾಧನೆಯನ್ನು ಪ್ರಸ್ತುತ ಪಡಿಸುವುದರ ಜೊತೆಗೆ ಅವರ ವೈಯಕ್ತಿಕ ಬದುಕಿನ ಬಗ್ಗೆಯೂ ಬೆಳಕನ್ನು ಚೆಲ್ಲುತ್ತದೆ. ಎಲೆಮರೆಯ ಕಾಯಿಯಂತಿರುವ ಅನೇಕ ಸಾಧಕರ ಪರಿಚಯ ಮಾಡಿಸಿಕೊಟ್ಟಿದೆ. ವಾರಾಂತ್ಯದಲ್ಲಿ ಪ್ರಸಾರವಾಗುವ ಈ ಕಾರ್ಯಕ್ರಮ ವೀಕ್ಷಕರಿಗೆ ಮನರಂಜನೆಯನ್ನು ನೀಡುವುದರ ಜೊತೆಗೆ ಅವರ ಕಾರ್ಯಕ್ಷೇತ್ರವನ್ನೂ ಪರಿಚಯಿಸುತ್ತದೆ.

—ಎಚ್.ಎಸ್. ಶ್ರೀಮತಿ, ಬೆಂಗಳೂರು

ಐಶ್ವರ್ಯ ಮತ್ತು ಸೌಂದರ್ಯ ಸೋದರಿಯರು ಒಂದು ಗಂಟೆ ಕಾಲ ಶಾಸ್ತ್ರೀಯ ಸಂಗೀತದ ಮೃಷ್ಟಾನ್ನವನ್ನೇ ಬಡಿಸಿದರು. ಅವರನ್ನು ಪರಿಚಯಿಸಿದ ಚೆಂದದ ಚಂದನ ವಾಹಿನಿಗೆ ಧನ್ಯವಾದಗಳು.

—ನಾರಾಯಣ ಯಾಜಿ ಶಿರಾಲಿ

ವೆಂಕಟೇಶ್ವರ ಸುಪ್ರಭಾತ ಪರಿಚಯವಿಲ್ಲದ ಜನರೇ ಇಲ್ಲ. ಆ ಸುಪ್ರಭಾತ ಸುಬ್ಬಮ್ಮನ ಮರಿಮಕ್ಕಳಾದ ಐಶ್ವರ್ಯ ಮತ್ತು ಸೌಂದರ್ಯ ಚಂದನದಲ್ಲಿ ‘ವಾರದ ಅತಿಥಿ’ಯಾಗಿ ಸುಶ್ರಾವ್ಯವಾಗಿ ಹಾಡಿದರು. ವೀಣಾ ವಾದನ, ನೃತ್ಯ ಮತ್ತು ಪಿಟೀಲು ವಾದನದಲ್ಲೂ ಅವರು ಪ್ರಾವೀಣ್ಯರು ಎಂದು ತಿಳಿಯಿತು.

—ವೀಣಾ ಶಂಕರ್, ಬೆಂಗಳೂರು

## ಕೃಷ್ಣೇಗೌಡರ ಪತ್ರ

ಝೀ ಕನ್ನಡದ ‘ಜೋಡಿ ನಂ.1’ ಶೋನಲ್ಲಿ ಕಲಾವಿದ ಕೃಷ್ಣೇಗೌಡರ ಷಷ್ಟ್ಯಬ್ದಿ ಹಾಗೂ ದಂಪತಿಯ ವಿವಾಹ ವಾರ್ಷಿಕೋತ್ಸವವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ಗೌಡರು ತಮ್ಮಿಬ್ಬರು ಹೆಣ್ಣುಮಕ್ಕಳ ವಿವಾಹದ ದಿನದಂದು ತಾವು ಬರೆದ ಪತ್ರವನ್ನು ಓದಿ ಸಭಿಕರೊಂದಿಗೆ ತಾವೂ ಕಣ್ಣೀರಾದರು.

‘ನನ್ನಿಬ್ಬರು ಹೆಣ್ಣುಮಕ್ಕಳು ನನಗೆ ದೇವರು ಕೊಟ್ಟ ಅಮೂಲ್ಯ ಉಡುಗೊರೆ. ನಾನೀಗ ಸಂತೃಪ್ತ. ಈ ಜನ್ಮದಲ್ಲಿ ನನಗಿನ್ನೇನೂ ಬೇಡ’ ಎಂಬ ಸಾರ್ಥಕ ಭಾವವನ್ನು ಪ್ರಕಟಿಸಿದರು. ಹೆಣ್ಣು ಹಡೆದರೆ ಸೊಸೆಯನ್ನು ತೆಗಳಿ ಮನೆಯಿಂದ ಹೊರಗಟ್ಟುವ, ಭ್ರೂಣದಲ್ಲಿರುವಾಗಲೇ ಗರ್ಭಪಾತ ಮಾಡಿಸುವ, ವಂಶೋದ್ಧಾರಕನಿಗೆ ಪರಿತಪಿಸುವ ಮಂದಿಗೆ ಕನ್ನಡ ಮೇಷ್ಟ್ರು ಕೃಷ್ಣೇಗೌಡ ಒಳ್ಳೆಯ ಪಾಠವನ್ನೇ ಬೋಧಿಸಿದ್ದಾರೆ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

ನಟ ಪ್ರೇಮ್, ಮಾಳವಿಕಾ, ಅರ್ಜುನ್ ಜನ್ಯ, ಅನುಶ್ರೀ ನೇತೃತ್ವದ ‘ಜೋಡಿ ನಂ 1’ ಶೋನಲ್ಲಿ ಉದಯೋನ್ಮುಖ ತಾರಾ ಜೋಡಿಗಳನ್ನು ಸ್ಪರ್ಧಿಗಳಾಗಿ ಆಯ್ಕೆ ಮಾಡಿರುವುದು ಚೆನ್ನಾಗಿದೆ. ಇದರಲ್ಲಿ ಗಮನ ಸೆಳೆದ ಜೋಡಿ ಕೃಷ್ಣೇಗೌಡ–ಕಲ್ಪನಾ ಅವರದು. ಕೃಷ್ಣೇಗೌಡರನ್ನ ಹಾಸ್ಯ, ಹರಟೆ, ಚರ್ಚೆಯಂತಹ ಕಾರ್ಯಕ್ರಮಗಳಲ್ಲಿ ನೋಡಿದ್ದೆವು. ಅವರ ನಿರರ್ಗಳ ಮಾತು ಮುದ ನೀಡುತ್ತಿತ್ತು. ಈ ಕಾರ್ಯಕ್ರಮ ಮುಂದಿನ ದಿನಗಳಲ್ಲಿ ಮಾಮೂಲಿ ಲೈವ್ ಶೋಗಳಂತೆ ಆಗದೆ ಸದಭಿರುಚಿಯಿಂದ ಭಿನ್ನ ಎನಿಸಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು